# ಹಿನ್ನೆಲೆ

ಹನ್ನೆರಡನೆಯ ಶತಮಾನವು ಕರ್ನಾಟಕದಲ್ಲಷ್ಟೇ ಅಲ್ಲ, ಇಡೀ ವಿಶ್ವದ ವಿನೂತನವಾದ, ಇಂದಿಗೂ ನಿತ್ಯನೂತನವಾದ ಚರಿತ್ರೆಯ ಮುಖಪುಟವಾಗಿ ಮಾರ್ಪಾಡಾದ ಭವ್ಯ ಶತಮಾನ. ತರ-ತಮ ಭಾವಗಳ ಅವ್ಯವಸ್ಥೆಯ ಆಕರವಾಗಿದ್ದ ಸಮಾಜದ ಭಿನ್ನ ಸ್ತರಗಳನ್ನು ಸಮಾನತೆಯತ್ತ ಸಾಗಿಸುವ ಹೊಣೆಗಾರಿಕೆಯನ್ನು ಹೆಗಲಿಗೇರಿಸಿಕೊಂಡು ಸ್ವಯಂಸೇವಕನೆಂದು ಕರೆದುಕೊಂಡ ಕಾರಣಿಕಪುರುಷನು ಕಾಣಿಸಿಕೊಂಡ ಸತ್ಕಾಲ. 'ಅಣ್ಣ ಬಸವಣ್ಣ'ನೆಂದು ಸಕಲರಿಂದಲೂ ಸ್ತುತ್ಯನಾದರೂ, 'ಎನಗಿಂತ ಕಿರಿಯರಿಲ್ಲ' ಎಂಬ ವಿನಯವನ್ನು ಮೈಗೂಡಿಸಿಕೊಂಡವನು ಮೂರ್ತೀಭವಿಸಿದ ಕಾಲ. ಕಲ್ಯಾಣ ಪಟ್ಟಣದ 'ಅನುಭವಮಂಟಪ'ಕ್ಕೆ ಭಾರತದಾದ್ಯಂತ ಸಾವಿರಾರು ಶರಣರು ಧಾವಿಸಿ, ಒಕ್ಕೊರಲಿನಿಂದ 'ಕಾಯಕವೇ ಕೈಲಾಸ' ಎಂದು ಘೋಷಿಸಿ, ನಡೆ-ನುಡಿ ಒಂದಾಗಿ ನಡೆದ ಕಾಲ. ವಿಶ್ವದಲ್ಲೇ 'ನ ಭೂತೋ ನ ಭವಿಷ್ಯತಿ' ಎಂಬಂತಹ ಕಾಲ, ದೇಶ, ಸಮಾಜವನ್ನು ರೂಪಿಸಿದ ಕಾಲ.

ಬಸವಣ್ಣ ಕಲ್ಯಾಣಕ್ರಾಂತಿಯ ಪ್ರವರ್ತಕನಾದರೂ ಅವನ ಜೊತೆಗೆ ಹೆಗಲೆಣೆಯಾಗಿ ದುಡಿದವರು ಅಸಂಖ್ಯ ಶರಣರು. ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕ ನಾಗಮ್ಮ, ಸಿದ್ಧರಾಮ, ಮಡಿವಾಳ ಮಾಚಿದೇವ, ನಂಬಿಯಣ್ಣ, ನುಲಿಯ ಚಂದಯ್ಯ, ಮಧುವರಸ, ಕಕ್ಕಯ್ಯ, ಹರಳಯ್ಯ ಮೊದಲಾದವರು ತಮ್ಮ ತನು-ಮನ-ಧನವೆಲ್ಲವನ್ನು ಕ್ರೋಢೀಕರಿಸಿ, ವೀರಶೈವಧರ್ಮದ ಹಿರಿಮೆಯನ್ನು ಮುಗಿಲಿನೆತ್ತರಕ್ಕೆ ಹಾರಿಸಿದವರು. ತಮ್ಮ-ತಮ್ಮ ಕಾಯಕವನ್ನು ಕೈಗೊಳ್ಳುತ್ತಲೇ ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದವರು. ದೈವದ ಬಗೆಗೆ ತಮಗಿರುವ ಸಮಾನ ಮನೋಭಾವದ ಸಂಕೇತವಾಗಿ ಇಷ್ಟಲಿಂಗವನ್ನು ಧರಿಸಿದವರು. ತಮ್ಮ- ತಮ್ಮ ಅನುಭವಗಳನ್ನು ತಮ್ಮದೇ ಆದ ಶೈಲಿಯಲ್ಲಿ ವಚನ ರೂಪದಲ್ಲಿ ಲೋಕದ ಮುಂದಿಟ್ಟವರು. ಪ್ರಾಯಃ ಪಂಡಿತ -ಪಾಮರರು ಸಮಾನವಾಗಿ ಅನುಭವಗಳನ್ನು ಶಬ್ದಗಳ ಘುಖಾಂತರ ಒಟ್ಟಾಗಿ ಸಾರಿದ, ಗೋಷ್ಠಿ ನಡೆಸಿದ, ತಪ್ಪುಗಳನ್ನು ತಿದ್ದಿ, ಮುನ್ನಡೆದ ದೃಷ್ಟಾಂತ ಇದೊಂದೇ ಇರಬಹುದು.

ಕಾಲ ಎಲ್ಲ ಒಳಿತಿಗೂ, ಕೆಡುಕಿನ ಹಾಗೆಯೇ, ಮಂಗಳ ಹಾಡುತ್ತದೆ, ತನ್ನ ಪಾಡಿಗೆ. ಹಾಗೆಯೇ ಏರಿದ ಚಕ್ರ ಇಳಿಯಲೇಬೇಕೇನೋ. ಬಸವಣ್ಣನು ಬಯಲಾದ ಬಳಿಕ ಅಲ್ಲಿದ್ದ ಸಾವಿರಾರು ಶರಣರು ದೇಶದೆಲ್ಲೆಡೆ ಚದುರಿ ಹೋದರು. ಲಕ್ಷ-ಲಕ್ಷ ಸಂಖ್ಯೆಗಳಲ್ಲಿ ಸಂಗ್ರಹಿಸಿಟ್ಟಿದ್ದ ವಚನಗಳ ಕಟ್ಟುಗಳನ್ನು ತಮ್ಮೊಂದಿಗೆ ಕೊಂಡೊಯ್ದರು. ಅವರ ಆ ಸಮಯದ ಬೇಗುದಿಯಲ್ಲಿ ಕಳೆದ ಕಟ್ಟುಗಳೆಷ್ಟೋ, ನಾಶಪಡಿಸಿದ ಕಟ್ಟುಗಳೆಷ್ಟೋ ತಿಳಿಯದಾಗಿದೆ. ಅದರೆ ಅನಂತರದ ಕಾಲಕ್ಕೆ ವಚನಗಳನ್ನು ತಲುಪಿಸಿದ ಶ್ರೇಯಸ್ಸು ಅವರದಾಗಿದೆ.

ಮುಂದಿನ ಕಾಲಘಟ್ಟದಲ್ಲಿ ಶರಣರ ಜನಾಂದೋಲನವು ತಣ್ಣಗೆ ಹರಿಯುವ ನದಿಯಂತೆ ಸದ್ದಿಲ್ಲದೆ ಒಳಗೇ ನಡೆಯುತ್ತಿತ್ತು. ಮತ್ತೆ ಆ ಆಂದೋಲನವು ತೀವ್ರ ಪ್ರವಾಹದ ಸ್ವರೂಪವನ್ನು ಕಂಡುಕೊಂಡಿದ್ದು ವಿಜಯನಗರದ ಅರಸು ಪ್ರೌಢದೇವರಾಯನ ಕಾಲದಲ್ಲಿ. ಆಗ ಎಡೆಯೂರು ಸಿದ್ಧಲಿಂಗೇಶ್ವರರು ಮತ್ತು ನೂರೊಂದು ಶರಣರು ನಾಡಿನಾದ್ಯಂತ ಸಂಚರಿಸಿ ವೀರಶೈವಧರ್ಮದ ಪುನರುತ್ಥಾನವನ್ನು ಮಾಡಿದರು.

ಅತ್ತ ದೆಹಲಿಯಲ್ಲಿ ಮುಸ್ಲಿಮರು ಸಿಂಹಾಸನವನ್ನು ಆಕ್ರಮಿಸಿದ್ದರು. ಉತ್ತರ ಕರ್ನಾಟಕದ ವಿಜಾಪುರ, ಬೀದರ್, ಗುಲ್ಬರ್ಗಾಗಳಲ್ಲೂ ಮುಸ್ಲಿಂ ಆಳ್ವಿಕೆಯಿತ್ತು. ಸುಲ್ತಾನರ, ಅವರ ಕಡೆಯ ಅಧಿಕಾರಿಗಳ ದಬ್ಬಾಳಿಕೆ, ಸಮ್ಮತವಲ್ಲದ ಅವರ ಆಚಾರ - ವ್ಯವಹಾರಗಳು ಜನರ ಮೇಲೆ ತೀವ್ರ ಪರಿಣಾಮ ಬೀರಿದವು. ವಿಜಯನಗರದ ಅರಸರಿಗೂ ಅವರಿಗೂ ಆಗಾಗ್ಗೆ ಯುದ್ಧ ಸಂಭವಿಸುತ್ತಿದ್ದು ತತ್ಪರಿಣಾಮಗಳು ಭೀಕರವಾಗಿರುತ್ತಿದ್ದವು.

ಹಿಂದು - ಮುಸಲ್ಮಾನರಲ್ಲಿ ಆಹಾರ-ವಿಹಾರ, ಆಚಾರ-ವಿಚಾರಗಳಲ್ಲಿ ಮೂಲಭೂತವಾದ ಅಂತರಗಳಿದ್ದವು. ಅವು ಎಂದೆಂದೂ ಒಂದಾಗದಷ್ಟು ಸಮಾನಾಂತರ ರೇಖೆಗಳಂತಿದ್ದವು. ದಿಲ್ಲಿಯ ಮೊಗಲ್ ಬಾದಶಹರ ದರ್ಬಾರಿನ ಪರಿಣಾಮವಾಗಿ ಭಾರತೀಯ ಧಾರ್ಮಿಕ ಸಂಪ್ರದಾಯಗಳನ್ನು ಎಂದಿನಂತೆ ಆಚರಿಸಲು ಕಷ್ಟವೊದಗಿತು. ಉತ್ತರ ಭಾರತದಲ್ಲಿ ತಳವೂರಿದ್ದ ಮುಸಲ್ಮಾನರ ಸಂಖ್ಯೆ

ಹೆಚ್ಚತೊಡಗಿ, ಕ್ರಮೇಣ ದಕ್ಷಿಣ ಭಾರತಕ್ಕೆ ವಲಸೆ ಬರಲು ಪ್ರಾರಂಭಿಸಿದರು. ಅವರಲ್ಲಿ ಸೂಫಿಗಳು ಇದ್ದರು. ಅವರ ಬೋಧನೆಗಳಿಗೆ ಮೊದಮೊದಲು ಕಿವಿಗೊಡದಿದ್ದ ಹಿಂದುಗಳು ಕ್ರಮೇಣ ಆ ಬೋಧನೆಗಳೂ ತಮ್ಮ ಧರ್ಮದ ಬೋಧನೆಗಳಂತಿವೆ ಎಂಬುದನ್ನು ಅರಿಯಲಾರಂಭಿಸಿದರು.

ಇವರೆಲ್ಲರ ಜೊತೆ ಸದ್ದಿಲ್ಲದೆ, ಸುದ್ದಿ ಮಾಡದೆ, ಕೈಜೋಡಿಸಿದ ಮತ್ತೊಂದು ಬಗೆಯ ಶರಣರ ಬೃಹತ್ ವೃಂದವೇ ಇದೆ. ಉತ್ತರ ಕರ್ನಾಟಕದಲ್ಲಿ ಮುಸ್ಲಿಮರು ಹಿಂದುಗಳ ಮೇಲೆ ಮಾಡಿದ ಧಾರ್ಮಿಕ, ಸಾಂಸ್ಕೃತಿಕ ದಾಳಿಯನ್ನು ನೇರವಾಗಿ ಎದುರಿಸಲು ಅಸಾಧ್ಯವಾದ್ದರಿಂದ ಒಂದು ರೀತಿಯ ಸಂಧಾನ ಮಾರ್ಗವನ್ನು ಅನಿವಾರ್ಯವಾಗಿ ಅಳವಡಿಸಿಕೊಂಡು, ಸಮಾಜದಲ್ಲಿ ಸಂಘರ್ಷವನ್ನು ಕೈಲಾದ ಮಟ್ಟಿಗೆ ಕಡಿಮೆ ಮಾಡಲು ಶ್ರಮಿಸಿದ ಸಮೂಹವಿದೆ. ಇಂತಹ ಮಹಾಮಹಿಮರಲ್ಲಿ ಹೆಬ್ಬಾಳ (ಚಾಂದಕವಠಿ) ಪರಮಾನಂದ, ಕೊಡೇಕಲ್ಲ ಬಸವಣ್ಣ, ಸಾವಳಗಿ ಶಿವಲಿಂಗೇಶ್ವರ, ಸಾರೋಟಗಿಯ ಶಿವಯೋಗೀಶ್ವರ, ದಿಗ್ಗಿಯ ಸಂಗಮನಾಥ , ತೇರದಾಳ ಬಸವಪ್ರಭು, ನಾಗಾವಿಯ ಗುಂಡಬಸವ, ಗಗನಾಪುರದ ಗಂಗಪ್ಪಯ್ಯ, ಶಿರಹಟ್ಟಿ ಫಕೀರೇಶ್ವರ ಮುಂತಾದವರು ಪ್ರಮುಖರು. ಈ ಸಾಲಿನಲ್ಲಿ ಸಲ್ಲುವ ಮತ್ತೊಂದು ಹೆಸರು ತಿಂಥಿಣಿ ಮೋನಪ್ಪಯ್ಯ. ಇವರ ವೈಶಿಷ್ಟ್ಯವೆಂದರೆ ಶರಣರೂ, ಅನುಭಾವಿಗಳೂ ಆದ ಇವರು 'ಸಂತರು'ಎಂದೇ ಹೆಸರಾದವರು. ಜನಸಾಮಾನ್ಯರ ಮನಗಳಲ್ಲಿ ನೆಲೆಯೂರಿದ್ದ ಇವರ ಬಗ್ಗೆ ಜಾನಪದ ಕವಿಗಳು ವಿಶೇಷ ಲಕ್ಷ್ಯ ಬೀರಿದ್ದರು ಎಂಬುದು ಗಮನಾರ್ಹವಾದ ಸಂಗತಿ.

ಯಾವುದೇ ಕ್ಷೇತ್ರದಲ್ಲಿ ಪ್ರಸಿದ್ಧವಾದ ವ್ಯಕ್ತಿಯ ಕಾಲ, ದೇಶ, ಜೀವನ, ಸಾಧನೆಗಳ ಬಗ್ಗೆ ಕುತೂಹಲ ಮೂಡುವುದು ಸಹಜವಾದುದು. ವ್ಯಕ್ತಿಯ ಸಾಧನೆಯೇ ಮುಖ್ಯವಾದರೂ, ಅವನ ಹಿನ್ನೆಲೆಯನ್ನು ಅರಿಯುವುದು ಸಾಧನೆಗೆ ಪೂರಕವಾಗುತ್ತದೆ. ಆದರೆ ಅರಿಯುವಲ್ಲಿ ಶ್ರದ್ಧೆ ಹಾಗೂ ಜಾಗರೂಕತೆ ಅಗತ್ಯ. ಏಕೆಂದರೆ ನಿಷ್ಪಕ್ಷಪಾತ ಮನಸ್ಸು ಮತ್ತು ಬುದ್ಧಿಯಿಂದ ತಿಳಿಯಲು ಪ್ರಯತ್ನಿಸಿದಲ್ಲಿ ಮಾತ್ರ ಪೂರ್ವಾಗ್ರಹವು ಬಾಧಿಸುವುದಿಲ್ಲ, ಚರಿತ್ರೆಗೆ ಧಕ್ಕೆ ಬರುವುದಿಲ್ಲ.

## ಸಂತ ಮೋಸಪ್ಪಯ್ಯ

ಓರ್ವ ಕವಿಯ ವೈಯಕ್ತಿಕ ವಿಚಾರಗಳನ್ನು ಬಾಹ್ಯ ಹಾಗೂ ಅಂತರಂಗ ಮಾಹಿತಿಗಳಿಂದ ಅಧ್ಯಯನ ಮಾಡಬಹುದು. ಮೋನಪ್ಪಯ್ಯನ ಉಪಲಬ್ಧ 814 ವಚನಗಳ ಸಂಗ್ರಹವು ಮೂಲ ಹಾಗೂ ಅಂತರಂಗ ಮಾಹಿತಿಯೆನಿಸುತ್ತದೆ. ಆತನ ಬಗ್ಗೆ ಉಪಲಬ್ಧವಾಗಿರುವ ಸಾಹಿತ್ಯವು ಬಾಹ್ಯ ಹಾಗೂ ಆನುಷಂಗಿಕ ಮಾಹಿತಿ ಎನಿಸುತ್ತದೆ. ಇದನ್ನು ಡಾ. ಎಂ.ಎಂ.ಪಡಶೆಟ್ಟಿಯವರು ಹೀಗೆ ವರ್ಗೀಕರಿಸಿದ್ದಾರೆ:

1. ಮೋನಪ್ಪಯ್ಯನ ವಚನಗಳು
2. ಶರಣ ಮೋನಪ್ಪಯ್ಯನ ಚರಿತ್ರೆ - ಶಂಕರ ಕವಿ( ಹದಿನೆಂಟನೇ ಶತಮಾನ)
3. ಶ್ರೀ ಮೌನೇಶ್ವರ ಬಾಲಲೀಲೆ - ಚಿನ್ನದಗುಡಿ ಬೋಳಮಲ್ಲ(ಹತ್ತೊಂಬತ್ತನೇ ಶತಮಾನದ ಅಂತ್ಯ)
4. ಮೋನಪ್ಪಯ್ಯನನ್ನು ಕುರಿತ ಆಧುನಿಕ ಸಾಹಿತ್ಯ
5. ಜನಪದ ಗೀತಸಾಹಿತ್ಯ
6. ಐತಿಹ್ಯಗಳು
7. ಆಚರಣೆ ಹಾಗೂ ಕುರುಹುಗಳು

ಇವುಗಳ ಜೊತೆಗೆ ಮೋನಪ್ಪಯ್ಯನ ಬಗ್ಗೆ ಮಾಹಿತಿ ನೀಡಬಲ್ಲ ಸ್ಥಿರ ಆಕರಗಳು ಇವೆಯೆಂದರೆ ಅಚ್ಚರಿಯಾಗಬಹುದು. ಆತನ ಹೆಸರಿನಲ್ಲಿ ನಿರ್ಮಿಸಿರುವ ಮಂದಿರಗಳೂ ಮಾಹಿತಿ ನೀಡಬಲ್ಲವು. ಕಲಬುರ್ಗಿ ಜಿಲ್ಲೆಯ ಅಳ್ಳೊಳ್ಳಿ, ಗೋನಾಳ, ತಿಂಥಿಣಿ, ರಾಯಚೂರು ಜಿಲ್ಲೆಯ ಕೊಪ್ಪಳ, ಲಿಂಗನಬಂಡಿ, ಧಾರವಾಡ ಜಿಲ್ಲೆಯ ವರವಿ, ಹುಲಗೂರ, ವಿಜಾಪುರ ಜಿಲ್ಲೆಯ ಗದ್ದನಕೇರಿ ಮೊದಲಾದ ಕ್ಷೇತ್ರಗಳಲ್ಲಿ ಮೋನಪ್ಪಯ್ಯನ ಮಂದಿರಗಳು ನಿರ್ಮಾಣವಾಗಿವೆ. ಈ ಸುಕ್ಷೇತ್ರಗಳಲ್ಲಿ ನಿತ್ಯ ಆರಾಧನೆ, ಜಾತ್ರೆ, ಉತ್ಸವಗಳು ಶ್ರದ್ಧಾಭಕ್ತಿಯಿಂದ ನಡೆಯುತ್ತವೆ. ಇವೂ ಕೂಡ ಮೋನಪ್ಪಯ್ಯನ ಚರಿತ್ರೆಯ ಕಥಾನಕಗಳಾಗಿವೆ. ಅವನ ಅದ್ಭುತ ಸಾಧನೆಗಳ ಮೂರ್ತರೂಪಗಳಾಗಿವೆ. ಇಂದೂ ಮೋನಪ್ಪಯ್ಯನು ಲಕ್ಷಾಂತರ ಮಂದಿಗೆ ಮಾದರಿಯಾಗಿದ್ದಾನೆ ಎಂಬುದಕ್ಕೆ ಜೀವಂತ ಸಾಕ್ಷಿಗಳಾಗಿವೆ.

ಕಾಲ :

ರಕ್ಕಸಗಿ - ತಂಗಡಿಗಿ ಕದನವಾದ ಬಳಿಕ ವಿಜಯನಗರದ ಅರಸರು ವಿರೂಪಾಕ್ಷನ ಸನ್ನಿಧಾನವೂ, ವೈಭವೋಪೇತವೂ ಆದ ಹಂಪೆಯನ್ನು ತ್ಯಜಿಸಿ ಪೆನುಗೊಂಡೆಯನ್ನು ರಾಜಧಾನಿಯನ್ನಾಗಿ ಮಾಡಿ ಆಳ್ವಿಕೆ ನಡೆಸಿದರು. ಆದರೆ ಅವರ ಪೂರ್ವಜನಾದ ಕೃಷ್ಣದೇವರಾಯನ ಸುವರ್ಣಯುಗಕ್ಕೆ ಮತ್ತೆ ಚಾಲನೆ ದೊರೆಯಲಿಲ್ಲ. ಅರಸರ ಅಧೀನರಾಗಿದ್ದ ಹಲವಾರು ಮಂದಿ ಪಾಳೆಯಗಾರರು ಹದಿನೇಳನೇ ಶತಮಾನದ ಮಧ್ಯಭಾಗದಲ್ಲಿ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಅವರಲ್ಲಿ ಬಹುಸಂಖ್ಯಾತರು ಬೇಡವಂಶಸ್ಥರು. ಅವರು ಕನಕಗಿರಿ, ಮುದುಗಲ್, ಬಳ್ಳಾರಿ, ಚಿತ್ರದುರ್ಗ, ಗುಡಗುಂಟಿ, ಸುರಪುರ ಮುಂತಾದ ಕ್ಷೇತ್ರಗಳಲ್ಲಿ ನೆಲೆಸಿದ್ದರು.

ಮೇಲಿನ ಸ್ಥಳಗಳಲ್ಲಿ ಒಂದಾದ ಸುರಪುರದಲ್ಲಿದ್ದ ಬೇಡಸಂಸ್ಥಾನದ ಮೂಲಪುರುಷನಾದವನು ಗಡ್ಡಿಪಿಡ್ಡನಾಯಕ. ಅವನ ಕಾಲ ಸುಮಾರು ಕ್ರಿ.ಶ. 1639-1666. ಅವನು ಪಟ್ಟಕ್ಕೇರಿದ ಬಗ್ಗೆ ಮೋನಪ್ಪಯ್ಯನು,

'ಬ್ಯಾಡರಿಗೆ ಪಟ್ಟವನು ರೂಢಿಗೀಶ್ವರ ಕೊಟ್ಟನು
ನಾಡಿಗರಿಗೆ ಬಂತು ಪ್ರಳಯವು
ನೋಡು ನೋಡು ಈ ಪರಿಯ ಬಸವಣ್ಣ
ಬೇಡಿದವರಿಗೆ ಕೊಡದಂಥ ಪೀಡಿಗಳ ಬದುಕನು
ಬ್ಯಾಡರಿಗೆ ಹಚ್ಚಿ ಸುಲಿಸುವೆನು ನಾಡಿನಿಂದಿಳಿಸುವೆನು'

ಎಂದಿದ್ದಾನೆ. ಅಲ್ಲದೆ ಮೋನಪ್ಪಯ್ಯನು ಮೊಗಲ್ ದೊರೆ ಆದಿಲ್‌ಶಾಹಿ, ವಿಜಯನಗರದ ಅರಸರು ಹಾಗೂ ಪಾಳೆಯಗಾರರ ಕಾಲ ಮತ್ತು ವೈಶಿಷ್ಟ್ಯಗಳನ್ನು ತನ್ನ ವಚನಗಳಲ್ಲಿ ಉಲ್ಲೇಖಿಸಿದ್ದಾನೆ. ಇವುಗಳಿಂದ ಆತನು ಹದಿನೇಳನೇ ಶತಮಾನಕ್ಕೆ ಸೇರಿದವನೆಂದು ಊಹಿಸಬಹುದು.

ಮೋನಪ್ಪಯ್ಯನು ತನ್ನ ಕಾಲಜ್ಞಾನ ವಚನವೊಂದರಲ್ಲಿ ಹೀಗೆ ಹೇಳಿಕೊಂಡಿದ್ದಾನೆ ;

## ಸಂತ ಮೋನಪ್ಪಯ್ಯ

'ಏಳನೂರು ಎಪ್ಪತ್ತೇಳುಪರಿ ವರುಷದ
ಊಳಿಗದ ದಿನವು ಮುಗಿಯಿತು | ಮರ್ತ್ಯಕ್ಕೆ
ತಾಳ ಪ್ರಮಾಣವುದ್ಧ ರಕ್ತ ಹರಿದೀತು
ಕಾಲಜ್ಞಾನ ಒದಗಿತು ಎಂದಿನ್ನು
ಸಾರಲಿ ಬಂದೆ ಮರ್ತ್ಯಕ್ಕೆ ಬಸವಣ್ಣ'

ಎಂದರೆ ಧರ್ಮವನ್ನು ಮೆಟ್ಟಿ ನಿಂತ ಅಧರ್ಮಕ್ಕೆ ಮಂಗಳ ಹಾಡಲು ತಾನು 777 1/2 ವರ್ಷಗಳ ಬಳಿಕ ಮತ್ತೆ ಜನಿಸಿ ಬಂದಿರುವುದಾಗಿ ತಿಳಿಸಿದ್ದಾನೆ. ಎಲ್ಲ ಧರ್ಮಗಳಲ್ಲಿಯೂ ಪರಮಾತ್ಮನು ಪ್ರತಿ ಯುಗದಲ್ಲಿ ಧರ್ಮದ ಉಳಿವಿಗಾಗಿ, ಅಧರ್ಮದ ಅಳಿವಿಗಾಗಿ ಅವತಾರ ತಾಳುವನೆಂಬ ದೃಢ ನಂಬಿಕೆಯಿದೆ. ಅಂತಹ ನಂಬಿಕೆಯ ಒಂದು ರೂಪ ಮೇಲಿನ ವಚನ ಎನ್ನಬಹುದು.

ಶಂಕರ ಕವಿಯ 'ಶರಣ ಮೋನಪ್ಪಯ್ಯನ ಚರಿತ್ರೆ'ಯಲ್ಲಿ "ಪ್ರಭುದೇವರು, ಮುಕ್ತಾಯಕ್ಕ, ಸಿದ್ಧರಾಮ, ಚೆನ್ನಬಸವ, ಕಿನ್ನರಿ ಬೊಮ್ಮಯ್ಯ ಮುಂತಾದ ಶಿವಶರಣರಿಗೆ ಮೋನಪ್ಪಯ್ಯನು ಶೂನ್ಯಲಿಂಗವನ್ನು ಅನುಗ್ರಹಿಸಿದನು. ಮತ್ತೊಮ್ಮೆ ಆ ಅಲ್ಲಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಮೊರೆಯಿಟ್ಟನು. ಅದಕ್ಕೆ ಕರಗಿದ ಅಲ್ಲಮನು ಸ್ವತಃ ಆಗಮಿಸಿ ಅವನಿಗೆ ಗುರೂಪದೇಶವನ್ನು ನೀಡಿದನು" ಎಂದು ವರ್ಣಿತವಾಗಿದೆ.

ಆ ಕೃತಿಯಲ್ಲಿಯೇ ಮುಂದೆ ಮೋನಪ್ಪಯ್ಯನು ಲಕ್ಷ್ಮೇಶ್ವರದಲ್ಲಿ ಆದಿಲ್‌ಶಾಹಿಯ ಆಡಳಿತಾಧಿಕಾರಿಯಾಗಿದ್ದ ಅಂಕುಶಖಾನನನ್ನು ಭೇಟಿಯಾಗಿದ್ದನು ಎಂದು ಉಕ್ತವಾಗಿದೆ. ಅಂಕುಶಖಾನನ ಕಾಲ ಹದಿನೇಳನೇ ಶತಮಾನ ಎಂದು ದೃಢಪಟ್ಟಿದೆ. ಅಲ್ಲದೆ ಸ್ವತಃ ಮೋನಪ್ಪಯ್ಯನೇ ತನ್ನ ವಚನಗಳಲ್ಲಿ ಅಂಕುಶಖಾನನನ್ನು ಉಲ್ಲೇಖಿಸಿದ್ದಾನೆ. ಆದ್ದರಿಂದ ಮೋನಪ್ಪಯ್ಯನು ಹನ್ನೆರಡನೇ ಶತಮಾನಕ್ಕೆ ಸೇರಿದ ಶರಣರನ್ನು ಭೇಟಿ ಮಾಡಿರುವ ಪ್ರಸಂಗವನ್ನು ದಂತಕಥೆ'ಯೆಂದು ಪರಿಭಾವಿಸಬೇಕಾಗುತ್ತದೆ.

ಹೀಗೆಯೇ ಚಿನ್ನದಗುಡಿ ಬೋಳಮಲ್ಲನ 'ಮೌನೇಶ್ವರ ಬಾಲಲೀಲೆ'ಯಲ್ಲಿ ಮೋನಪ್ಪಯ್ಯನು ಕಲ್ಯಾಣ ಪಟ್ಟಣಕ್ಕೆ ತೆರಳಿ ಅಲ್ಲಿ ಅಣ್ಣ ಬಸವಣ್ಣನಿಗ

ಬೋಧಿಸಿದನೆಂದು, ಅವನಿಗೆ ಅನೇಕ ಲೀಲೆಗಳನ್ನು ತೋರಿದನೆಂದು ವರ್ಣಿಸಲಾಗಿದೆ. ಜೊತೆಯಲ್ಲಿ ಬೇಡರಿಗೆ ರಾಜ್ಯ ದೊರೆಯಿತೆಂದೂ, ಸುರಪುರ ಸಂಸ್ಥಾನದ ಮೂಲಪುರುಷ ಗಡ್ಡಿಪಿಡ್ಡನಾಯಕನು (1636-1666) ಮೋನಪ್ಪಯ್ಯನನ್ನು ಗೌರವಿಸಿದನು ಎಂದೂ ಹೇಳಲಾಗಿದೆ. ಈ ಪ್ರಸಂಗವನ್ನು 'ಶರಣ ಮೋನಪ್ಪಯ್ಯನ ಚರಿತ್ರೆ'ಯಲ್ಲಿಯೂ ಕಾಣಬಹುದು.

ಮೋನಪ್ಪಯ್ಯನು ತನ್ನ ವಚನದಲ್ಲಿ ಒಂದೆಡೆ,

'ಹಿರಿಯ ಅಂಕುಶಖಾನ ಸತ್ತಂದಿನ ಮಾತು
ಎಮ್ಮೆ ಬಸವಣ್ಣನ ಇಮ್ಮಡಿ ತಮ್ಮ ಬಸವಣ್ಣ
ಡಂಗುರವ ಸಾರಬೇಕೆಂದು ಚೆನ್ನಬಸವಣ್ಣ
ಬಂದೀನಿ ಕಾಣಿರೋ '

ಎಂದಿದ್ದಾನೆ. ಎಮ್ಮೆ ಬಸವಣ್ಣನ ಕಾಲ ಸುಮಾರು ಕ್ರಿ.ಶ.1543 ಎಂದು ನಿಶ್ಚಿತವಾಗಿದೆ. ಅವನ ಇಮ್ಮಡಿ ತಮ್ಮ ತಾನೆಂದು ಹೇಳಿರುವುದರಿಂದ ಹದಿನೇಳನೇ ಶತಮಾನದವನೆಂದು ಹೇಳಬಹುದು.

"ಶ್ರೀ ಖಾಜಾ ಅಮೀನದೀನರ ಅಂತ್ಯಸಮಯದಲ್ಲಿ ಅವರ ಶಿಷ್ಯರಾದ ಶಿರಹಟ್ಟಿ ಫಕೀರೇಶ್ವರರು ಗುರುವಿನ ಮುಂದಿನ ಅವತಾರದ ಬಗ್ಗೆ ತಿಳಿಯಲು ಅಪೇಕ್ಷಿಸಿದರು. ಆಗ ಅಮೀನದೀನರು 'ಮುಂದೆ ನಾನು ಮೋನಪ್ಪಯ್ಯನಾಗಿ ಹುಟ್ಟಿ ಬರುವೆನು" ಎಂದು ಅರುಹಿದರು ಎಂಬ ಉಕ್ತಿ ಪ್ರಚಲಿತದಲ್ಲಿದೆ. ಅಮೀನದೀನರು ಕ್ರಿ.ಶ. 1570ರಲ್ಲಿ ಇಹಲೋಕವನ್ನು ತ್ಯಜಿಸಿದರು ಎಂಬುದು ಖಚಿತವಾಗಿದೆ. ಆದ್ದರಿಂದಲೂ ಮೋನಪ್ಪಯ್ಯನು ಹದಿನಾರನೇ ಶತಮಾನದ ಅನಂತರದವನು ಎಂದು ತಿಳಿಯುತ್ತದೆ.

ಕ್ರಿ.ಶ.16ನೇ ಶತಮಾನದಲ್ಲಿ ಕುರುಬ ಗೊಲ್ಲಾಳನು ಮಾಡಿದ ಲಿಂಗದ ಪವಾಡವನ್ನು ಕುರಿತು ಮೋನಪ್ಪಯ್ಯನು ದಾಖಲಿಸಿದ್ದಾನೆ;

'ಆಡಿನ ಹಿಕ್ಕೆಯನು ಮಾಡಿದರು ಲಿಂಗವನು
ರೂಢಿಗೀಶ್ವರನ ಶರಣ ಸದ್ಭಕ್ತರಿಗಲ್ಲದೆ
ಲೋಕದ ಪೀಡೆಗಳಿಗೆ ಲಿಂಗ ಸಲ್ಲುವುದೇನು ಬಸವಣ್ಣ'

ಇದರಿಂದ ಮೋನಪ್ಪಯ್ಯನು ಗೊಲ್ಲಾಳನ ಸಮಕಾಲೀನ ಎಂದು ತಿಳಿಯುತ್ತದೆ.

ಹೀಗೆ ಹಲವು ಸಾಕ್ಷ್ಯಾಧಾರಗಳಿಂದ ಮೋನಪ್ಪಯ್ಯನ ಕಾಲವನ್ನು ಜೀವಣ್ಣ ಮಾಸಳಿಯವರು ಹದಿನಾರನೇ ಶತಮಾನದ ಉತ್ತರಾರ್ಧ ಎಂದು, ಕೆ.ಪಿ. ಈರಣ್ಣನವರು ಕ್ರಿ.ಶ. 1540-1630 ರವರೆಗೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಿನಲ್ಲಿ ಲಭ್ಯ ಮಾಹಿತಿಗಳ ಆಧಾರದಿಂದ ಆತನು ಹದಿನೇಳನೇ ಶತಮಾನದವನು ಎನ್ನಬಹುದು.

ದೇಶ :

"ಗದಗುನಾಡ ಗಾವುದಿ ಎಲಬುರುಗಿನಾಡ ಹೊಲೆಯ
ಕುಷ್ಟಗಿ ನಾಡು ನಷ್ಟ ತಾವರೆಗೇರಿ ತಡಾಕಿ
ಮುದುಗಲ್ಲು ನಾಡು ಮೂಲ ಸಗರ ನಾಡು ವಸ್ತಾದಿ'

ಎಂದು ಮೋನಪ್ಪಯ್ಯನು ಸಗರನಾಡಿನ ಪ್ರಸ್ತಾಪವನ್ನು ಮಾಡಿದ್ದಾನೆ.

ಈ ಸಗರನಾಡು ಕಲಬುರ್ಗಿ ಜಿಲ್ಲೆಯಲ್ಲಿದೆ. 'ಸಗರ ಸಾವಿರಹಳ್ಳಿ'ಎಂದು ಹೆಸರಾಗಿದ್ದ ಈ ನಾಡು ಸಿಂದಗಿ, ಯಾದಗಿರಿ, ಲಿಂಗಸುಗೂರ, ದೇವದುರ್ಗ, ಮುದ್ದೇಬಿಹಾಳ, ಶಹಾಪುರ, ಸುರಪುರ, ಜೇವರ್ಗಿ ತಾಲ್ಲೂಕುಗಳ ವ್ಯಾಪ್ತಿಪ್ರದೇಶವನ್ನು ಹೊಂದಿದೆ.

ಸಗರನಾಡಿಗೆ ಸೇರಿದ ಗೋನಾಳ ಗ್ರಾಮದಲ್ಲಿ ಮೋನಪ್ಪಯ್ಯನು ಜನಿಸಿದನೆಂದು ಹೇಳಲಾಗಿದೆ;

'ಆತ ಗೋನಾಲಿನ ಆದಿಬ್ರಹ್ಮರ ಕುಲ
ಜಾತ ಬಾಲ್ಯದಿ ಅರಿಯಮ್ಯಾಲೆ

ಓತು ಲಿಂಗವನಿರಿಸಿ ಪೂಜಿಸಲು ಬೆಳೆಯಾಯ್ತು ಉ
ನ್ನತ ಎಲ್ಲ ರರಿಯೆ'.||

—— ಶರಣ ಮೋನಪ್ಪಯ್ಯನ ಚರಿತ್ರೆ

ಮತ್ತು

'ಸುರಪುರದ ಬಾಹ್ಯದ ಸಮೀಪದ
ಲ್ಲಿರುವ ಗೋನಾಳ ಗ್ರಾಮ ಕರ್ಮ
ಹರರು ಸತಿಪತಿಯು ಇರ್ವರು ಶೇಷನಾಮದಲಿ'.||

—— ಮೋನಯ್ಯನ ಬಾಲಲೀಲೆ

ಗೋನಾಳದಲ್ಲಿರುವ ಮೋನಪ್ಪಯ್ಯನ ಮಂದಿರ ಇದಕ್ಕೆ ಪೂರಕವಾಗಿದೆ. ಸುರಪುರದ ರಾಜಮನೆತನದ ಆಸ್ಥಾನ ಮಂತ್ರಿಗಳಾದ ಶೆಟ್ಟಿ ಸೋಲಬಣ್ಣ, ನಿಷ್ಠೆಯ ಕಡಲಪ್ಪ ಮತ್ತು ನಿಷ್ಠೆಯ ವೀರಪ್ಪ ಈ ಮಂದಿರವನ್ನು ಕಟ್ಟಿಸಿದರು ಎಂಬುದು ತಿಳಿದುಬಂದಿದೆ.ಗೋನಾಳದಲ್ಲಿನ ಆದಿಲಿಂಗೇಶ್ವರ ದೇವಾಲಯವು ಇಂದಿಗೂ ಅಸ್ತಿತ್ವದಲ್ಲಿದೆ. ಜನಪದ ಸಾಹಿತ್ಯದಲ್ಲಿ ಮೋನಪ್ಪಯ್ಯನು ಗೋನಾಳದಲ್ಲಿ ಜನಿಸಿದನೆಂದು ಹೇಳುವ ಪದ್ಯಗಳು ಅನೇಕ. ಅವುಗಳಲ್ಲಿ ಕೆಲವು ಹೀಗಿವೆ ;

'ಹುಟ್ಟಿದ್ದು ಗೋನಾಳ ಬೆಳೆದದ್ದು ವರವಿಸ್ಥಳ
ಮೆರೆಯುವುದು ಲಿಂಗನಬಂಡೆಲ್ಲಿ |ಮೋನಪ್ಪಯ್ಯ
ಸ್ಥಿರವಾದದ್ದು ತಿಂಥಿಣಿ ಹೌದೇನೋ'.
'ಧರೆಯೊಳು ಗೋವಿನಾಳ ಗ್ರಾಮದಿ ಪುಟ್ಟಿ
ಮೆರೆದೆ ಲಿಂಗನಬಂಡಿಯಲ್ಲಿ
ವರವಿ ಘನಲಿಂಗದೊಳು ಕುರುವಿಟ್ಟು ಕಡೆಯಲ್ಲಿ
ಪರಮ ತಿಂಥಿಣಿಗುಹೆಕ್ಕೆರಗಿ|ಶ್ರೀ ಗುರು ಮೌನ'.
'ಹುಟ್ಟಿದ್ದು ಗೋನಾಲದಲಿ | ಸುರಪುರದಲ್ಲಿ ಮಗನ ಕೊಲ್ಲಿ
ಹೋದ ಪ್ರಾಣ ತಂದುಕೊಟ್ಟು ಮಾಯವಾದನೋ'.

## ಸಂತ ಮೋನಪ್ಪಯ್ಯ

'ಗೋನಾಳ ಹುಟ್ಟಿದ ಗ್ರಾಮ ಅಲ್ಲಿಂದ ನಡೆಸಿದ ಮಹಿಮ
ಗಾಣಿಗೇರ ಮನ್ಯಾಗ ದುಡದಿ ಏಸೋದಿನ ನೀ ಗಾಣ ಹೊಡೆದಿ
ಅಲ್ಲಿಂದ ಮುಂದಕ ನಡದಿ'.

ಈ ಮಾತುಗಳಿಂದ ಮೋನಪ್ಪಯ್ಯನು ಗೋನಾಳದಲ್ಲಿ ಜನಿಸಿ, ಅಲ್ಲಿನ ಪರಪ್ಪಶೆಟ್ಟಿಯ ಮನೆಯಲ್ಲಿ ಗಾಣ ಹೊಡೆಯುತ್ತಿದ್ದನೆಂದು ತಿಳಿಯುತ್ತ...

ಪೋಷಕರು :

ಶಂಕರ ಕವಿಯು ಮೋನಪ್ಪಯ್ಯನ ತಂದೆ – ತಾಯಿಯರ ಮತ್ತು ಆತನ ಬಾಲ್ಯದ ಬಗ್ಗೆ ವಿವರಿಸಿಲ್ಲ. ಆತನು ವಿಶ್ವಕರ್ಮ ಧರ್ಮದವನೆಂದು, ಚಿನ್ನದ ಕೆಲಸ ಮಾಡುತ್ತಿದ್ದನೆಂದು ಹೇಳಿದ್ದಾನೆ. ಆದರೆ ಬೋಳಮಲ್ಲನು, 'ಮೋನಪ್ಪಯ್ಯನ ತಂದೆ-ತಾಯಿಯರು ಹಾವಪ್ಪ ಮತ್ತು ಹಾಲಮ್ಮ. ವಿಶ್ವಕರ್ಮ ಕುಲಕ್ಕೆ ಸೇರಿದ ಅವರಿಗೆ ಸಂತಾನವಿರಲಿಲ್ಲ. ಅವರು ಫಲಪ್ರಾಪ್ತಿಗಾಗಿ ಆದಿಲಿಂಗೇಶ್ವರನಿಗೆ ಶರಣಾದರು. ಅವರ ಅಕಳಂಕ ಭಕ್ತಿಗೆ ಮಾರುಹೋದ ಶಿವನೇ ಭವದಲ್ಲಿ ಮಗನಾಗಿ ಜನಿಸಿದನು' ಎನ್ನುತ್ತಾನೆ.

ಲೋಕದಲ್ಲಿ ಸಾಮಾನ್ಯರಿಗಿಂತ ವಿಭಿನ್ನವಾಗಿ ಮಹಾಪುರುಷರ ಜನ್ಮವು ಅಲೌಕಿಕವೂ, ಅದ್ಭುತವೂ ಆಗಿರಬೇಕು ಎಂಬ ನಂಬಿಕೆಯ ಮೂರ್ತರೂಪ ಇಲ್ಲಿದೆ. ಮೋನಪ್ಪಯ್ಯನ ಹಲವು ವಚನಗಳು ಇದಕ್ಕೆ ಪೂರಕವಾಗಿರುವಂತೆ ತೋರುತ್ತದೆ;

'ಕೂಗಿನ ಮಾರಯ್ಯನ ಆಗಮುದ ಮಗ ನಾನು
ಯೋಗಿ ಜೋಗಿಯ ಮಗನಲ್ಲ ಧರ್ಮದ
ಆಗಮುವುಳ್ಳಂಥವರ ಮಗನಯ್ಯ ಬಸವಣ್ಣ'.
'ಸೂತ್ರಧಾರವ ಕರದಲ್ಲಿ ಹಿಡಿದುಕೊಂಡು
ಸುತಾರ ಚೆನ್ನಬಸವಣ್ಣ ಬರುವಂಥ
ಸೂಚನೆಯ ಕೇಳಿರೋ ಶರಣರಿರ್ಯಾ'.

ಕೂಗಿನ ಮಾರಯ್ಯನ ಮಗ ತಾನೆಂದು ಮೋನಪ್ಪಯ್ಯನು ಸಾರಿದ್ದಾನೆ. ಶರಣರು ತಮಗಿಂತ ಹಿರಿಯರಾದ, ಆದರ್ಶವೆಂದು ಗೌರವಿಸುವ ಶರಣರ ಮಗ ತಾನೆಂದು